ಕೃಷಿ ಹಿನ್ನೆಲೆಯಿಂದ ಬಂದ ವಿನಾಯಕ ಅರಳಸುರಳಿ ಅವರ ಹುಟ್ಟೂರು ತೀರ್ಥಹಳ್ಳಿಯ ಅರಳಸುರಳಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದಲ್ಲಿ ಶಿಕ್ಷಣ ಪಡೆದು, ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಈಗ ಕೃಷಿಗೆ ಮರಳಿದ್ದಾರೆ. 'ಮರ ಹತ್ತದ ಮೀನು' ಅವರ ಪ್ರಕಟಿತ ಕಥಾಸಂಕಲನ. 'ನವಿಲುಗರಿ ಮರಿ ಹಾಕಿದೆ' ಪ್ರಬಂಧ ಸಂಕಲನ.

ತುತ್ತು ಬಯಸಿ ಹೋದವಳು ಕೆನ್ನೆ ಊದುವಂಥಾ ಏಟಿನ ಜೊತೆ ಹಿಂದಿರುಗುತ್ತಿದ್ದಳು. ಹೀಗೇ ಮುಂದುವರಿಯುತ್ತಾ ಮುಂದೆ ಆಕೆ ಮೆಲ್ಲ ಮೆಲ್ಲನೆ ತನ್ನ ಹೃದಯದಲ್ಲಿ ಮಮತೆಯ ಹೆಸರಲ್ಲಿ ಅಮ್ಮನಿಗೆ ಹಾಸಿದ್ದ ರತ್ನಗಂಬಳಿಯನ್ನು ಮಡಿಚಿಟ್ಟುಬಿಟ್ಟಳು. ಅಲ್ಲೀಗ ಅಪ್ಪನದೇ ರೂಪ, ಪ್ರೀತಿ ಹೊತ್ತ ಅಣ್ಣ ಪ್ರತಿಷ್ಠಾಪನೆಯಾಗಿದ್ದ. ಕಳಚಿ ಹೋದ ಕೊಂಡಿ ಉಳಿದ ಕೊಂಡಿಯ ಬೆಸುಗೆಯನ್ನು ಗಟ್ಟಿಗೊಳಿಸಿತ್ತು.

* * *

'ಇವತ್ತಿಡೀ ಆಗಿದ್ದು ಇನ್ನೂರೇ ರೂಪಾಯಿ ವ್ಯಾಪಾರ'.

ಗಲ್ಲಾಪೆಟ್ಟಿಗೆಯ ತುತ್ತ ತುದಿಯ ಮೂಲೆಯನ್ನೂ ಕೆದಕುತ್ತಾ ಅಮ್ಮ ಹಾಗೆಂದಾಗ ಶ್ರೀಮುಖ ನಿಟ್ಟುಸಿರಿಟ್ಟ. ಹೊರಗಡೆ ಕೆಂಪಾದ ಸಂಜೆಯೊಂದು ಕರಗುತ್ತಲಿತ್ತು. ದಿನದ ಕಟ್ಟಕಡೆಯ ಲಾಂಚು ನಡು ನೀರಿನಲ್ಲಿತ್ತು. ಅಂಗಡಿಯ ಪಡಸಾಲೆಯ ಮರದ ಬೆಂಚಿನ ಮೇಲೆ ಕುಳಿತ ಶ್ರೀಮುಖ ಲಾಂಚು ಸಾಗಿದ ದಾರಿಯಲ್ಲಿ ಮೂಡಿ ಮರೆಯಾಗುತ್ತಿರುವ ಕ್ಷಣಿಕ ದಾರಿಯನ್ನೇ ನೋಡತೊಡಗಿದ. ಅವನಿಗೆ ಚೆನ್ನಾಗಿ ನೆನಪಿದೆ. ಸಾಯುವ ಕೆಲವೇ ಕ್ಷಣಗಳ ಮುನ್ನ ಅಪ್ಪ ಉಡುಗಿದ ದನಿಯಲ್ಲಿ 'ಚೆನ್ನಾಗಿ ನೋಡಿಕೋ' ಎಂದುದರ ಪೈಕಿ ಮೊದಲನೆಯವಳು ಅಮ್ಮ. ಎರಡನೆಯದು ಈ ಅಂಗಡಿ. ತನ್ನಿಡೀ ಬದುಕಿನುದ್ದಕ್ಕೂ ಅವನು ಇನ್ನಿಲ್ಲದಂತೆ ಪ್ರೀತಿಸಿದ ಎರಡೇ ಎರಡು ಸಂಗತಿಗಳೆಂದರೆ ಅವೇ. ತಾನೇ ಕೇಳಿದ್ದನಲ್ಲಾ? ಕಾಡಿನಲ್ಲಿನ ಬಿದಿರಿನ ಗಳಗಳನ್ನು ಕಡಿದು, ಹೆಗಡೇರ ತೋಟದಿಂದ ಬೇಡಿ ತಂದ ಸೋಗೆಯ ಗರಿಗಳನ್ನು ಹೊದಿಸಿ, ಕಲ್ಲಿನ ಮೇಲೆ ಕಲ್ಲಿಟ್ಟು ಬೆಂಚು ಮಾಡಿ, ಅಂಗಳಕ್ಕೆಲ್ಲ ಸಗಣಿ ನೀರು ಬಳಿದು, ಪುಟ್ಟ ಹಕ್ಕಿಯೊಂದು ಜತನದಿಂದ ಗೂಡು ಕಟ್ಟಿದಂತೆ ಈ ಅಂಗಡಿಯನ್ನು ಅಪ್ಪ ಕಟ್ಟಿದ್ದ. ನದಿಯಾಚೆಗಿನ ಸಾಗರ ಪೇಟೆಯ ಯಾವುದೋ ಅಂಗಡಿಯಲ್ಲಿ ಕಡ ಹೇಳಿ ಪೆನ್ನು, ಪುಸ್ತಕ, ಚಂಬು, ಬಕೇಟು, ಸೋಪು, ಬ್ರಶ್ಶುಗಳನ್ನು ತಂದು ಮಾರಾಟಕ್ಕಿಟ್ಟಿದ್ದ. ನಂತರ ಸಿಗೊಂದೂರಿನ ದೇವಸ್ಥಾನಕ್ಕೆ ಪ್ರಸಿದ್ಧಿ ದೊರೆತು, ಇಲ್ಲಿಂದಲೂ ದಡ ದಾಟಿ ಬರುವವರ ಸಂಖ್ಯೆ ಹೆಚ್ಚಿದ ಮೇಲೆ ಟೀ, ಕಾಫಿ, ಬಜ್ಜಿಗಳನ್ನೂ ತನ್ನ ಪಟ್ಟಿಗೆ ಸೇರಿಸಿಕೊಂಡಿದ್ದ. ಪ್ರವಾಸಿಗರು ಕೇಳುತ್ತಾರೆ ಎಂಬ ಕಾರಣಕ್ಕೆ ಬೆಳಗ್ಗೆ ಬೇಗ ಎದ್ದು, ಗೌಡರ ತೋಟದಲ್ಲಿ ಮರ ಹತ್ತಿ, ವೀಳ್ಯದೆಲೆ ಕೊಯ್ದು ತರುತ್ತಿದ್ದ. ಗಿರಾಕಿಗಳು ಇಲ್ಲದ ಹೊತ್ತಿನಲ್ಲಿ ಅಡಿಕೆಯುಂಡೆಗಳನ್ನು ಚಿಕ್ಕಚಿಕ್ಕದಾಗಿ ಕತ್ತರಿಸುತ್ತಾ ಕೂರುತ್ತಿದ್ದ. ಅಮ್ಮ ಹೇಳುತ್ತಿದ್ದಳು: ಅವನಿಗೆ ಒಂದೆರಡು ಜಮೀನುದಾರರ ಮನೆಯಲ್ಲಿ ಮನೆಯಳಿಯನಾಗುವ ಅವಕಾಶವಿತ್ತಂತೆ. 'ಈ ಚಿಲ್ರೆ ಅಂಗ್ಡಿ, ಈ ಒದ್ದಾಟ ಎಲ್ಲ ಬೇಡ. ಅವ್ರಿಗೊಳ್ಳೆ ಜಮೀನಿದೆ. ಒಪ್ಕೋ' ಎಂದು ಮನೆಯ ಹಿರಿಯರೆಲ್ಲ ಒತ್ತಡ ಹಾಕಿದ್ದರಂತೆ. ಆದರೆ, ಅವನು ಅಂಥಾ ಸಣ್ಣ ಯೋಚನೆಯನ್ನೂ ಮಾಡಿರಲಿಲ್ಲ. ಅವನ ಪಾಲಿಗೆ ಈ ಅಂಗಡಿ ಕೇವಲ ಹಣ ಮಾಡುವ ಮಾಧ್ಯಮವಾಗಿರಲಿಲ್ಲ. ಸಾಲ ಹೇಳಿ ಅಂಗಡಿಗೆ ಸಾಮಾನು ತರುವ ಒದ್ದಾಟದಲ್ಲಿ, ಮಳೆಯ ನೀರು ಒಳಗೆ ಸೋರದಂತೆ ತೇಪೆ ಹಾಕುವ ಕಿರಿಕಿರಿಯಲ್ಲಿ, ಆಚೆ ದಡದಿಂದ ಬರುವ, ಹಲವು ಸಲ ಬಾರದೇ ಹೋಗುವ ಗ್ರಾಹಕರನ್ನು ಕಾಯುವ ನಿರೀಕ್ಷೆಯಲ್ಲಿ ಲಾಭ, ನಷ್ಟಗಳನ್ನೆಲ್ಲ ಮೀರಿದ ಯಾವುದೋ ಸಾರ್ಥಕತೆಯನ್ನವನು ಕಂಡುಕೊಂಡಿದ್ದ. ಆಚೆಗಿನ ಪಟ್ಟಣದಿಂದ ತೇಲಿ ಬರುವ ಲಾಂಚಿನಲ್ಲಿ ತನ್ನಿಡೀ ಬದುಕೇ ಇದೆ ಎಂಬಂತೆ ಅದರ ದಾರಿ ಕಾಯುತ್ತಾ ಅವನು ಬದುಕಿಬಿಟ್ಟಿದ್ದ.

ಅಂಥಾ ಅಂಗಡಿಯೀಗ ಮುಚ್ಚಿ ಹೋಗುತ್ತದೆಯೇ?

ಲಾಂಚಿನ ಹಿಂದೆ ಮೂಡಿ ಮರೆಯಾಗುವ ನೀರ ದಾರಿಗಳಂತೆಯೇ ಪರಿಹಾರ ಮಾರ್ಗಗಳೂ ಅಸ್ಪಷ್ಟವಾಗಿದ್ದವು. ಅದನ್ನೇ ಮನೋಹರಿಯ